# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.–1160/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/11/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಉಡುಪಿ ತಾಲ್ಲೂಕು, ಆವರ್ಸೆ ಗ್ರಾಮದ ಸರ್ವೆ ನಂ. 103 ವಿಸ್ತೀರ್ಣ 1.89 ಎಕರೆ ಜಮೀನನ್ನು ಅಕ್ರಮ ಸಕ್ರಮ ಸಮಿತಿಯು ನಿಯಮ ಬಾಹಿರವಾಗಿ ಅರಣ್ಯ ಇಲಾಖೆಯ ಅನುಮತಿ ಪಡೆಯದೆ ಮಂಜೂರು ಮಾಡಿದ್ದು, ಸದರಿ ಜಮೀನಿನ ಮಂಜೂರಾತಿಯನ್ನು ನಿಯಮಾನುಸಾರ ರದ್ದುಪಡಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಅಗತ್ಯ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ನಾಗರಾಜ್ ಕುಲಾಲ್ ತಂದೆ ಲೇಟ್ ಮಂಜು ಕುಲಾಲ್, ಆವರ್ಸೆ ಬಾಳ ಗುಡ್ಡೆ, ಆವರ್ಸೆ ಗ್ರಾಮ ಮತ್ತು ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಉಪವಿಭಾಗಾಧಿಕಾರಿ, ಕುಂದಾಪುರ (2) ತಹಶೀಲ್ದಾರ್, ಉಡುಪಿ (3) ರಾಜಸ್ವ ನಿರೀಕ್ಷಕರು, ಕೋಟ ಸಾಲಿಗ್ರಾಮ ಮತ್ತು (4) ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ (ಇನ್ನು ಮುಂದೆ 'ಎದುರುದಾರರು 1 ರಿಂದ 4' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ತನಿಖಾ ಅವಧಿಯಲ್ಲಿ (5) ಶ್ರೀಮತಿ ಹೇಮಲತಾ, ಹಿಂದಿನ ಉಪ ವಿಭಾಗಾಧಿಕಾರಿಗಳು, ಹಾಲಿ ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು ಹಾಗೂ, (6) ಶ್ರೀ ಕೆ.ಮೊಹ್ಮದ್ ಸಲಿಮ, ಹಿಂದಿನ ತಹಶೀಲ್ದಾರ್, ಹಾಲಿ ನಿವೃತ್ತಿ, ವಾಸ: ಮೆಸ್ಕಾಂ ಕಛೇರಿ ಎದುರು, ಚಿತ್ರಪಾಡಿ ಗ್ರಾಮ, ಬ್ರಹ್ಮವಾರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು 5 ಮತ್ತು 6' ಎಂದು ಕರೆಯಲ್ಪಡುತ್ತಾರೆ) ಸದರಿ ದೂರು ಮತ್ತು ಲಗತ್ತು ದಾಖಲೆಗಳ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಆವರ್ಸೆ ಗ್ರಾಮದ ಸರ್ವೇ ನಂಬರ್ 103 ರಲ್ಲಿ 1.89 ಸೆಂಟ್ಸ್ ಸ್ಥಿರಾಸ್ತಿಯು ಎನ್.ಸಿ.ಆರ್.ಡಿ. ನಂ.51/2002–03 ರ ಪ್ರಕಾರ ಕೊರ್ಗು ಶೆಟ್ಟಿ ಬಿನ್ ರಾಮಣ್ಣ ಶೆಟ್ಟಿ ಇವರಿಗೆ ಸಾಗುವಳಿ ಚೀಟಿಯಂತೆ ಮಂಜೂರಾಗಿದ್ದು, ಸದರಿ ಭೂಮಿಯು ಡೀಮ್ಡ್ ಫಾರೆಸ್ಟ್ ಭೂಮಿಯಾಗಿರುತ್ತದೆ. ಕೊರ್ಗು ಶೆಟ್ಟಿ ಇವರು ಸದರಿ ಸ್ಥಳದಲ್ಲಿ ವಾಸ್ತವ್ಯ ಹಾಗೂ ಯಾವುದೇ ಕೃಷಿಯನ್ನು ಮಾಡಿಕೊಂಡು ಬಂದಿರುವುದಿಲ್ಲ. ಅದಲ್ಲದೇ ಅವರಿಗೆ ಸ್ವಂತ ಭೂಮಿ ಇರುವುದರಿಂದ ಈ ಅಕ್ರಮ–ಸಕ್ರಮ ಅರ್ಜಿಯಲ್ಲಿ ಮಂಜೂರಾಗಿರುವ ಭೂಮಿಯನ್ನು ರದ್ದುಪಡಿಸಿ, ಬಡವರಿಗೆ ನೀಡಬೇಕಾಗಿ ವಿನಂತಿಸಿಕೊಂಡಿರುತ್ತಾರೆ.

3. 1 ರಿಂದ 3ನೇ ಎದುರುದಾರರ ಆಕ್ಷೇಪಣೆ:–

ಶ್ರೀ ಕೊರ್ಗು ಶೆಟ್ಟಿಯವರಿಗೆ ಅಕ್ರಮ ಸಕ್ರಮ ಜಮೀನು ಮಂಜೂರಿ ಮಾಡುವ ಸಮಯದಲ್ಲಿ ಯಾವುದೇ ಸ್ವಂತ ಜಮೀನು ಅರ್ಜಿದಾರರ ಹೆಸರಿನಲ್ಲಿ ಇದ್ದಿರುವುದಿಲ್ಲ. ಮಂಜೂರಾದ ಜಮೀನು ಅರಣ್ಯ ಜಮೀನೆಂಬ ಬಗ್ಗೆ ಜಮೀನು ಮಂಜೂರಾತಿ ಸಮಯದಲ್ಲಿ ಕಂದಾಯ ದಾಖಲೆಗಳಲ್ಲಿ (ಆರ್‌ಟಿಸಿ) ಯಾವುದೇ ನಮೂದು ಇದ್ದಿರುವುದಿಲ್ಲ. ಆ ಕಾರಣದಿಂದ ಸದರಿ ಜಮೀನಿನ ಮಂಜೂರಾತಿ ಪೂರ್ವದಲ್ಲಿ ಸರ್ಕಾರದ ಅನುಮತಿ ಪಡೆದಿರುವುದಿಲ್ಲ. ಕೊರ್ಗು ಶೆಟ್ಟಿಯವರಿಗೆ ಜಮೀನು ಮಂಜೂರು ಮಾಡುವ ಪೂರ್ವದಲ್ಲಿ ಸದರಿಯವರು ಜಮೀನಿನಲ್ಲಿ ಹಂಚು ಛಾವಣಿ ಮನೆ ಹಾಗೂ ಬಾವಿ, ಹಟ್ಟಿಕೊಟ್ಟಿಗೆ ಹಾಗೂ ಇತರೆ ಕೃಷಿಗಳನ್ನು ಮಾಡಿಕೊಂಡಿದ್ದು, ಮಂಜೂರಾತಿ ಆದೇಶದಲ್ಲಿ ನಮೂದಿಸಿರುವ ನಿಬಂಧನೆಗಳನ್ನು ಪಾಲನೆ ಮಾಡಿರುತ್ತಾರೆ (ಹಿಂದಿನ ಕಂದಾಯ ನಿರೀಕ್ಷಕರ ತನಿಖಾ ವರದಿ ಲಗತ್ತಿಸಿದೆ) ಎಂದು ನಮೂದಿಸಿರುತ್ತಾರೆ.

4. 4ನೇ ಎದುರುದಾರರ ಆಕ್ಷೇಪಣೆ:

ಆವರ್ಸೆ ಗ್ರಾಮದ ಸರ್ವೆ ನಂಬರ್: 103/1 ರಲ್ಲಿ 1.89 ಎಕ್ರೆ ಸ್ಥಳವನ್ನು ಅಕ್ರಮ–ಸಕ್ರಮದಡಿ ಭೂ ಮಂಜೂರಾತಿ ನೀಡುವ ಬಗ್ಗೆ ಅರಣ್ಯ ಇಲಾಖಾ ಅಭಿಪ್ರಾಯ ಪಡೆದುಕೊಳ್ಳದೇ ಕಂದಾಯ ಇಲಾಖೆ ವತಿಯಿಂದ ಭೂ ಮಂಜೂರಾತಿ ಆಗಿರುತ್ತದೆ. ಆವರ್ಸೆ ಗ್ರಾಮದ ಸರ್ವೆ ನಂಬರ್ 103/1 ರಲ್ಲಿ 1.89 ಎಕ್ರೆ ಸ್ಥಳದಲ್ಲಿ ಪ್ರಸ್ತುತ ಕಿ.ಬೋಗಿ ಮತ್ತು ಇತರ ಕಾಟು ಜಾತಿಯ ಒಟ್ಟು 69 ಮರಗಳಿದ್ದು, 0.30 ಸೆ.ಮೀಟರ್ ಅಳತೆಯ ಒಳಗಿನ 200 ಗಿಡಗಳಿದ್ದು, ಹೆಚ್ಚಿನ ಮರಗಳು ಕಟ್ಟಿಗೆಗೆ ಯೋಗ್ಯ ಮರಗಳಾಗಿರುತ್ತದೆ" ಎಂದು ನಮೂದಿಸಿರುತ್ತಾರೆ.

5. 5ನೇ ಎದುರುದಾರರ ಆಕ್ಷೇಪಣೆ:

ಆವರ್ಸೆ ಗ್ರಾಮದ ಸರ್ವೆ ನಂ. 103ರಲ್ಲಿ 1.89 ಸೆಂಟ್ಸ್ ಜಮೀನು ಒತ್ತುವರಿ ಮಾಡಿಕೊಂಡಿದ್ದರ ಮೇರೆಗೆ ಜಮೀನು ಸಕ್ರಮೀಕರಣ ಕೋರಿ ನಮೂನೆ-53ರಲ್ಲಿ ಒತ್ತುವರಿದಾರರಾದ ಶ್ರೀ ಕೂರ್ಗು ಶೆಟಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಮೇರೆಗೆ ಸಂಬಂಧಪಟ್ಟ ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ಪರಿಶೀಲಿಸಿ ಕಡತ ತಯಾರಿಸಿ ಜಮೀನು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುವ ಮೇರೆಗೆ ಉಡುಪಿ ತಾಲ್ಲೂಕು ತಹಶೀಲ್ದಾರ್ ರವರು ಕಡತವನ್ನು ಅಕ್ರಮ-ಸಕ್ರಮ ಸಮಿತಿಗೆ ಮಂಡಿಸಿರುತ್ತಾರೆ. ಸಮಿತಿಗೆ ಸ್ಥಳೀಯ ವಿಧಾನ ಸಭಾ ಕ್ಷೇತ್ರದ ಶಾಸಕರೇ ಅಧ್ಯಕ್ಷರಾಗಿದ್ದು ತಾಲ್ಲೂಕು ತಹಶೀಲ್ದಾರ್ ರವರು ಕಾರ್ಯದರ್ಶಿಯಾಗಿರುತ್ತಾರೆ. ದಿನಾಂಕ: 12/07/2002 ರಂದು ನಡೆದ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದರ ಮೇರೆಗೆ ದಿನಾಂಕ: 20/08/2002 ರಲ್ಲಿ ಸಾಗುವಳಿ ಚೀಟಿ ಮಂಜೂರು ಮಾಡಿರುತ್ತಾರೆ. ದಿನಾಂಕ: 12/08/2002 ರಿಂದ 13/02/2004 ರವರೆಗೆ ಕುಂದಾಪುರ ಉಪ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ನನ್ನ ಅವಧಿಯಲ್ಲಿ ಈ ಕಡತದ ಬಗ್ಗೆ ಯಾವುದೇ ವ್ಯವಹರಣೆ ನಡೆಸಿರುವುದಿಲ್ಲ. ಅಕ್ರಮ ಮಂಜೂರಾತಿಯಾಗಿದೆ ಎಂದು ಕಂಡುಬಂದಿದ್ದಲ್ಲಿ ಮಂಜೂರಾತಿಯನ್ನು ವಜಾಗೊಳಿಸುವ ಕುರಿತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಕೆಯಾಗಿದ್ದಲ್ಲಿ ಮಾತ್ರ ಉಪ ವಿಭಾಗಾಧಿಕಾರಿಗಳು ಮೇಲ್ಮನವಿ ಬಗ್ಗೆ ವಿಚಾರಣೆ ನಡೆಸಿ, ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 108(ಕೆ) ಪ್ರಕಾರ ಜಮೀನು ಮಂಜೂರಾತಿಯನ್ನು ವಜಾಗೊಳಿಸುವ ಅವಕಾಶ ದತ್ತವಾಗಿರುತ್ತದೆ. ನಾನು ಉಪ ವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ ಅವಧಿಯಲ್ಲಿ ಈ ಪ್ರಕರಣದಲ್ಲಿ ಯಾವುದೇ ಮೇಲ್ಮನವಿ ಸ್ವೀಕೃತವಾಗಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

6. 6ನೇ ಎದುರುದಾರರ ಆಕ್ಷೇಪಣೆ:

ಶ್ರೀ ಕೂರ್ಗು ಶೆಟ್ಟಿಯವರಿಗೆ ಅಕ್ರಮ ಸಕ್ರಮ ಜಮೀನು ಮಂಜೂರು ಮಾಡುವ ಸಮಯದಲ್ಲಿ ಸರ್ಕಾರಿ ನಿಗದಿಪಡಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸಲಾಗಿರುತ್ತದೆ. ಪ್ರಸ್ತಾಪಿತ ಜಮೀನು ಅರಣ್ಯ ಜಮೀನಾಗಿರುವುದಿಲ್ಲ. ಅರಣ್ಯ ಜಮೀನು ಎಂಬ ಬಗ್ಗೆ ಜಮೀನು ಮಂಜೂರಾತಿ ಸಮಯದಲ್ಲಿ ಕಂದಾಯ ದಾಖಲೆಗಳಲ್ಲಿ (RTC) ಯಾವುದೇ ನಮೂದು ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

7. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುಂದಾಪುರ ವಿಭಾಗ ರವರು ಸಲ್ಲಿಸಿರುವ ತನಿಖಾ ವರದಿ:

ಶ್ರೀ ಕೊರ್ಗು ಶೆಟ್ಟಿ ಇವರಿಗೆ, ತಹಶೀಲ್ದಾರರು, ಉಡುಪಿ ತಾಲ್ಲೂಕು ಇವರು ಸಾಗುವಳಿ ಚೀಟಿ ದಿನಾಂಕ: 20/08/2002 ರಂದು ನೀಡಿದ್ದು, ಆವರ್ಸೆ ಗ್ರಾಮ ಸರ್ವೆ ನಂ. 103/1 ರಲ್ಲಿ 1.89 ಎಕರೆ ಅಕ್ರಮ–ಸಕ್ರಮದಡಿ ಭೂ ಮಂಜೂರಾತಿ ಆಗಿರುತ್ತದೆ. ಈ ಜಮೀನಿನಲ್ಲಿ ಕಿ.ಬೋಗಿ, ಹುಣಾಲು ಮತ್ತು ಇತರೆ ಕಾಡು ಜಾತಿಯ ಒಟ್ಟು 69 ಮರಗಳು ಮತ್ತು 0.30 ಸೆ.ಮೀ.ಗಿಂತ ಕಡಿಮೆ ಸುತ್ತಳತೆಯ ಒಟ್ಟು 200 ಗಿಡಮರಗಳು ಸಾಗುವಾನಿ, ಮಾವು, ಮತ್ತು ಗೇರು ಜಾತಿಯ ಒಟ್ಟು 12 ಮರಗಳು ಇರುತ್ತದೆ. ಆವರ್ಸೆ ಗ್ರಾಮದ ಸರ್ವೆ ನಂ. 103/1 ರಲ್ಲಿ 1.89 ಎಕರೆ ಅಕ್ರಮ ಸಕ್ರಮದಡಿ ಭೂ ಮಂಜೂರಾತಿ ನೀಡುವ ಸಮಯದಲ್ಲಿ ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದುಕೊಂಡು ಭೂ ಮಂಜೂರಾತಿ ನೀಡಿರುವುದಿಲ್ಲ. ಶ್ರೀ ಕೊರ್ಗು ಶೆಟ್ಟಿ ಸದರಿ ಜಮೀನು ಮಂಜೂರಾತಿಗಾಗಿ ಅರ್ಜಿ ನಮೂನೆ 50ರಲ್ಲಿ ಕಂದಾಯ ಇಲಾಖೆಗೆ 1991 ಸಾಲಿನಲ್ಲಿ ಅರ್ಜಿ ಸಲ್ಲಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ. 1980ನೇ ಅರಣ್ಯ ಸಂರಕ್ಷಣಾ ಕಾಯಿದೆ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 202/1995ರ ನಿರ್ದೇಶನದಂತೆ, ಅರಣ್ಯ ಸ್ವರೂಪ ಹೊಂದಿರುವ ಯಾವುದೇ ಅರಣ್ಯ ಭೂಮಿಯನ್ನು ಇಲಾಖಾ ಅಭಿಪ್ರಾಯ ಪಡೆದುಕೊಳ್ಳದೇ ಭೂ ಮಂಜೂರಾತಿಗೆ ಅವಕಾಶ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

8. ತನಿಖೆಯಲ್ಲಿ ಕಂಡುಬಂದ ಅಂಶಗಳು:

(1) ಉಡುಪಿ ತಾಲ್ಲೂಕು ಆವರ್ಸೆ ಗ್ರಾಮದ ಸರ್ವೆ ನಂ. 103 ವಿಸ್ತೀರ್ಣ 1.89 ಎಕರೆ ಜಮೀನನ್ನು ಅಕ್ರಮ ಸಕ್ರಮೀಕರಣ ಸಮಿತಿಯು ಶ್ರೀ ಕೊರ್ಗುಶೆಟ್ಟಿ ಇವರಿಗೆ ದಿನಾಂಕ: 20/08/2002 ರಂದು ಮಂಜೂರು ಮಾಡಿದ್ದು ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ.

(2) ಸದರಿ ಜಮೀನಿನಲ್ಲಿ ಕಿ.ಬೋಗಿ, ಹುಣಾಲು ಮತ್ತು ಇತರೆ ಕಾಡು ಜಾತಿಯ ಒಟ್ಟು 69 ಮರಗಳು, 0.30 ಸೆ.ಮೀ ಗಿಂತ ಕಡಿಮೆ ಸುತ್ತಳತೆಯ ಒಟ್ಟು 200 ಗಿಡಮರಗಳು ಸಾಗುವಾನಿ, ಮಾವು, ಗೇರು ಜಾತಿಯ ಒಟ್ಟು 12 ಮರಗಳು ಇರುವುದಾಗಿ ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.

(3) ಅಕ್ರಮ ಸಕ್ರಮ ಮಂಜೂರಾತಿ ನಡವಳಿಯಲ್ಲಿ ಷರತ್ತುಗಳನ್ನು ವಿಧಿಸಿದ್ದು ಸರ್ಕಾರಕ್ಕೆ ಸಂಬಂಧಿಸಿದ ಮರಗಳನ್ನು ಅರಣ್ಯ ಇಲಾಖೆಯವರು ಕಾನೂನು ಪ್ರಕಾರವಾಗಿ ವಿಲೆ ಮಾಡುವ ಷರತ್ತಿಗೆ ಒಳಪಟ್ಟು ಸಾಗುವಳಿ ಚೀಟಿ ನೀಡಲಾಗುವುದು ಎಂದು ನಮೂದಿಸಿರುತ್ತಾರೆ.

(4) ದಿನಾಂಕ: 29/08/2018 ರಂದು ತನಿಖಾಧಿಕಾರಿಗಳು ತನಿಖಾ ವರದಿ ಸಲ್ಲಿಸಿ ಸದರಿ ಜಮೀನಿನಲ್ಲಿ ಈವರೆಗೂ ಕಾಡು ಜಾತಿಯ ಮರಗಳು ಹಾಗೂ ಇತರೆ ಮರಗಳು ಇರುವ ಬಗ್ಗೆ ನಮೂದಿಸಿದ್ದು ಅರಣ್ಯ ಇಲಾಖೆಯವರು ಈವರೆಗೂ ಕಾನೂನು ಪ್ರಕಾರ ಸದರಿ ಮರಗಳನ್ನು ವಿಲೆ ಮಾಡಿರುವುದಿಲ್ಲವೆಂದು ಕಂಡುಬಂದಿರುತ್ತದೆ.

(5) ಸದರಿ ಜಮೀನನ್ನು ಭೂ ಮಂಜೂರಾತಿ ನೀಡುವ ಸಮಯದಲ್ಲಿ ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯವನ್ನು ಪಡೆಯದೆ ಭೂ ಮಂಜೂರಾತಿ ಮಾಡಿರುವುದಾಗಿ ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.

(6) 1991ರಲ್ಲಿ ಅಕ್ರಮ ಸಕ್ರಮ ಅರ್ಜಿ ಸಲ್ಲಿಸಿದ್ದು 1980ನೇ ಅರಣ್ಯ ಸಂರಕ್ಷಣಾ ಕಾಯ್ದೆ ಹಾಗೂ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 202/1995ರ ನಿರ್ದೇಶನದಂತೆ ಅರಣ್ಯ ಸ್ವರೂಪ ಹೊಂದಿರುವ ಯಾವುದೇ ಅರಣ್ಯ ಭೂಮಿಯನ್ನು ಇಲಾಖಾ ಅಭಿಪ್ರಾಯ ಪಡೆದುಕೊಂಡೇ ಭೂ ಮಂಜೂರಾತಿಗೆ ಕ್ರಮ ಜರುಗಿಸಬೇಕಿದ್ದು ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದಿರುವುದು ಪ್ರಸ್ತುತ ಪ್ರಕರಣದ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ.

(7) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 94C(vii)(d) ಮತ್ತು 95 ರ ರೀತ್ಯಾ ಅರಣ್ಯ ಭೂಮಿಯನ್ನು ಕಂದಾಯ ಇಲಾಖೆಯವರು ಮಂಜೂರು ಮಾಡುವಂತಿರುವುದಿಲ್ಲ.

(8) ಅಕ್ರಮ ಸಕ್ರಮ ಸಮಿತಿಯ ಕಾರ್ಯದರ್ಶಿಗಳಾದ ತಹಶೀಲ್ದಾರರು ಸಮಿತಿ ನಡಾವಳಿಗಳು ಹಾಗೂ ಸಾಗುವಳಿ ಚೀಟಿಯಲ್ಲಿ ಸಹಿ ಮಾಡಿದ್ದು ಪರಿಶೀಲಿಸಲಾಗಿ ಸದರಿ ಸಹಿ 6ನೇ ಎದುರುದಾರರಿಗೆ ಸಂಬಂಧಿಸಿದ್ದು ಸದರಿಯವರು ದಿನಾಂಕ: 31/05/2003 ರಂದು ನಿವೃತ್ತಿ ಹೊಂದಿರುತ್ತಾರೆ.

(9) ಸಾಗುವಳಿ ಚೀಟಿಯಲ್ಲಿ 15 ವರ್ಷಗಳವರೆಗೆ ಪರಬಾರೆ ಮಾಡಬಾರದೆಂಬ ನಿಯಮ ವಿಧಿಸಿರುತ್ತಾರೆ.

9. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಉಡುಪಿ ತಾಲ್ಲೂಕು, ಆವರ್ಸೆ ಗ್ರಾಮದ ಸರ್ವೆ ನಂ. 103 ವಿಸ್ತೀರ್ಣ 1.89 ಎಕರೆ ಜಮೀನನ್ನು ಅಕ್ರಮ ಸಕ್ರಮ ಸಮಿತಿಯು ನಿಯಮ ಬಾಹಿರವಾಗಿ ಅರಣ್ಯ ಇಲಾಖೆಯ ಅನುಮತಿ ಪಡೆಯದೆ ಮಂಜೂರು ಮಾಡಿದ್ದು, ಸದರಿ ಜಮೀನಿನ ಮಂಜೂರಾತಿಯನ್ನು ನಿಯಮಾನುಸಾರ ರದ್ದುಪಡಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ನ್ಯಾಯಮೂರ್ತಿ ಎನ್. ಆನಂದ]** 27/11

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ, ಬೆಂಗಳೂರು.**